ಗುಬ್ಬಿಯಂಥ ಮನುಷ್ಯ ಹದಿನೈದು ದಿನ ಅನ್ನ, ನೀರು ಬಿಟ್ಟದ್ದನ್ನು ನೋಡಿ ಊರಿಗೆ ಊರೇ ಸ್ತಬ್ಧವಾಯಿತು. ಹದಿನೈದನೆ ದಿನ ಸುಬ್ರಹ್ಮಣ್ಯ ಶೆಟ್ಟರೇ ಬಂದು ಚಂದ್ರಣ್ಣನ ಹತ್ತಿರ ಕುಳಿತುಕೊಂಡರು.

"ಚಂದ್ರಣ್ಣಾ, ತಿಳಿದೋ, ತಿಳಿಯದೆಯೋ ನಾನು ತಪ್ಪು ಮಾಡಿದೆ. ಅದಕ್ಕೆ ಕೆಲವರು ನನಗೆ ಶಿಕ್ಷೆಕೊಟ್ಟರು. ಆಗಿದ್ದು ಆಗಿಹೋಯಿತು. ಇದಕ್ಕೆ ನಿನಗೆ ನೀನು ಶಿಕ್ಷೆ ಕೊಟ್ಟುಕೊಂಡಿದ್ದು ಸಾಕು. ನೀನು ಹೇಳಿದ ಹಾಗೆ ಮಾಡ್ತೀನಿ ಒಪ್ಪಿಗೆನಾ?" ಅಂದ ಪಶ್ಚತ್ತಾಪ ತುಂಬಿದ ದನಿಯಲ್ಲಿ.

ಚಂದ್ರಣ್ಣನ ಸತ್ಯಾಗ್ರಹ ಕೊನೆಗೊಂಡಿತು. ವಿದೇಶೀ ಪಾನೀಯವನ್ನು ಊರಿಂದ ಹೊರಗಟ್ಟಲಾಯಿತು. ಮುಂದೆ ರಾಷ್ಟ್ರವ್ಯಾಪಿ ಸ್ವಾತಂತ್ರದ ಹೋರಾಟ ಜೋರಾಯಿತು. ರಾಜ್ಯ ನಾಯಕರು ಕಾವಲಿಗೆ ಬಂದಾಗ ಪೆಂಡೆಂ ಸೋಡಾ ಸೆಂಟರ್ ವೇದಿಕೆಯಾಗುತ್ತಿತ್ತು.

ಇನ್ನು ಒಂದೆರಡು ದಿನಗಳಲ್ಲಿ ದೇಶಕ್ಕೆ ಬಿಡುಗಡೆ ಸಿಕ್ಕುತ್ತದೆಂದು ಖಾತ್ರಿಯಾಯಿತು. "ಆವತ್ತು ನಾವೆಲ್ಲ ದೊಡ್ಡ ಹಬ್ಬ ಮಾಡಬೇಕು. ರಾಷ್ಟ್ರಧ್ವಜ ಮೊದಲು ಪೆಂಡೆಂ ಸೋಡಾ ಸೆಂಟರ್‌ನಲ್ಲಿ ಹಾರಲಿ" ಅಂದ ಒಬ್ಬ ಹೋರಾಟಗಾರ.

"ಮೊದಲು ಈ ಸುದ್ದಿ ಊರಲ್ಲೆಲ್ಲಾ ತಿಳಿಯಬೇಕು. ಅದಕ್ಕೆ ವ್ಯವಸ್ಥೆ ಮಾಡಬೇಕು ಮಾರ್ರೆ..."

"ಅದು ಹೇಗೆ ಚಂದ್ರಣ್ಣಾ?..."

"ರೇಡಿಯೊ ತರೋಣ" ಅಂದ ಚಂದ್ರಣ್ಣ.

ಚಂದ್ರಣ್ಣನ ಪ್ರಯತ್ನದಿಂದಾಗಿ ಮರುದಿನವೇ ಮದ್ರಾಸಿನಿಂದ ಪೆಂಡೆಂ ಸೋಡಾ ಸೆಂಟರ್‌ಗೆ ರೇಡಿಯೊ ಬಂತು. ಅಲ್ಲಿಯವರೆಗೆ ಸಾಹುಕಾರರ ಮನೆಗಳ ಅಲಂಕಾರದ, ಗತ್ತಿನ ವಸ್ತುವಾಗಿದ್ದ ರೇಡಿಯೊ ರಸ್ತೆ ಪಕ್ಕ ಬಂದು, ನೆಹರೂ ಅವರ ಮೊತ್ತ ಮೊದಲ ಭಾಷಣವನ್ನು ಊರಿಗೆ ಊರೇ ಕೇಳಿಸಿತು.

ಹೆಂಗಸರು, ಮಕ್ಕಳು, ಮುದುಕರು, ಓದು ಬರಹ ಕಲಿಯದ ಸಾಮಾನ್ಯರು, ಚಳವಳಿಕಾರರು ಹೀಗೆ ಎಲ್ಲರೂ ಪೆಂಡೆಂ ಸೋಡಾ ಸೆಂಟರಿನ ಮುಂದೆ ನಿಂತು ಅಂತಹ ಇತಿಹಾಸ ಸೃಷ್ಟಿಸಿದ ಕ್ಷಣಗಳನ್ನು ಕೇಳಿ ಖುಷಿಪಟ್ಟರು. ಊರಿನ ಜನ ಬಹಳಷ್ಟು ವಾರ್ತೆಗಳನ್ನು ಹೀಗೆ ಕೇಳಿ ತಿಳಿದುಕೊಂಡರು. ಆದರೆ ಎರಡು ವಾರ್ತೆಗಳನ್ನು ಮಾತ್ರ ಚಂದ್ರಣ್ಣ ಕೊನೆವರೆಗೂ ಮರೆಯಲು ಸಾಧ್ಯವಾಗಲಿಲ್ಲ. ಮೊದಲನೆಯದು ಗಾಂಧೀಜಿಯ ದಾರುಣ ಹತ್ಯೆ. ಎರಡನೆಯದು ತೆಲುಗು ಭಾಷಿಕರ ಪ್ರಾಂತ್ಯಗಳನ್ನು ಒಟ್ಟುಗೂಡಿಸಿ ಅಖಂಡ ಆಂಧ್ರಪ್ರದೇಶ ರಾಜ್ಯಕ್ಕಾಗಿ ಹೋರಾಡಿದ ಪೊಟ್ಟಿ ಶ್ರೀರಾಮುಲು ಅವರ ಪ್ರಾಣತ್ಯಾಗ.

ಇದಲ್ಲದೆ ಮತ್ತೊಂದು ವಾರ್ತೆ ಚಂದ್ರಣ್ಣನನ್ನು ಬಹಳ ಕಾಡಿತ್ತು. ಅದು ದೇಶದೊಳಗೆ ಕೋಕಾ–ಕೋಲಾದ ರಂಗಪ್ರವೇಶ. ಕಪ್ಪನೆಯ ಕಾರ್ಮೋಡದಂತೆ ದೇಶದೊಳಗೆ ಕಾಲಿಟ್ಟ ವಿದೇಶಿ ಪಾನೀಯದ ಹೊಡೆತಕ್ಕೆ ಸ್ಥಳೀಯ ವ್ಯಾಪಾರಿಗಳು ಕಂಗಾಲಾಗಿ ಹೋದರು.

"ಸಿಟಿಯಲ್ಲಿ ಕಾಲೇಜು ಹುಡುಗರು ಇದಕ್ಕೆ ಮರುಳಾಗಿ ಬಿಟ್ಟಿದ್ದಾರೆ. ಕೋಕಾ–ಕೋಲಾ ಕುಡಿಯುವುದೇ ಹೊಸ ಫ್ಯಾಷನ್ ಆಗಿದೆ" ಹೀಗೆ ಸುದ್ದಿಗಳು ಚಂದ್ರಣ್ಣನ ಕಿವಿಗೆ ಬಿದ್ದವು. "ನಗರಕ್ಕೆ ಲಗ್ಗೆಯಿಟ್ಟ ಈ ಮಹಾಮಾರಿ ಇನ್ನು ಸಣ್ಣ ಊರಿಗೆ ಹಳ್ಳಿಗೆ ಬರಲು ಹೆಚ್ಚು ಸಮಯ ಹಿಡಿಲಿಕ್ಕಿಲ್ಲ ಮಾರ್ರೆ" ಅಂತ ಕೆಲವರು ಹೆದರಿಸುತ್ತಿದ್ದರು.

ಒಂದು ಬಿರು ಬಿಸಿಲಿನ ಮಧ್ಯಾಹ್ನದ ಹೊತ್ತಿಗೆ ಕೋಕಾ–ಕೋಲಾ ಕಂಪನಿಯ ದಕ್ಷಿಣ ಭಾರತದ ಮುಖ್ಯ ಅಧಿಕಾರಿಯೇ ಪೆಂಡೆಂ ಸೋಡಾ ಸೆಂಟರ್‌ಗೆ ಬಂದು ಚಂದ್ರಣ್ಣನವರನ್ನು ಭೇಟಿಯಾದ.

"ಚಂದ್ರಣ್ಣನವರೇ ನಾನು ಈ ಕೆಲಸಕ್ಕೆ ಸೇರಿ ಆರು ತಿಂಗಳಾಗಿದೆ. ಈ ಆರು ತಿಂಗಳಲ್ಲಿ ಮದ್ರಾಸು, ವಿಜಯವಾಡ ಮುಂತಾದ ಊರುಗಳಲೆಲ್ಲಾ ಸುತ್ತಿದ್ದೀನಿ. ಎಲ್ಲಿಗೆ ಹೋದರೂ ನಮ್ಮ ಕೂಲ್ ಡ್ರಿಂಕ್ಸ್ ಏಜೆನ್ಸಿ ಪಡೆಯಲು ಡಿಪಾಜಿಟ್‌ಗಾಗಿ ಎಷ್ಟಾದರೂ ಹಣ ಕಟ್ಟಲು ಜನ ತಯಾರಾಗಿದ್ದಾರೆ. ನೀವು